ಇ) ಈ ಬಗ್ಗೆ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಹೆಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಮಂತ್ರಿಗಳು).--

ಅ) ರೂ. ೪೩,೪೯,೬೦೦

ಆ) ಕೆರೆಯಂ ಒಡೆದಿಲ್ಲ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ

ಬರಗಾಲ ಪ್ರದೇಶದ ರೈತ ಕುಟುಂಬಕ್ಕೆ ಧಾನ್ಯದ ಸಾಲ ಯೋಜನೆಯ ಬಗ್ಗೆ.

೧೨೭. ಶ್ರೀ ಜಿ. ರಾಜೂಗೌಡ (ಹನೂರು).--ಮಾನ್ಯ ಕೃಷಿ ಮಂತ್ರಿ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬರಗಾಲ ಪ್ರದೇಶದ ಪ್ರತಿ ರೈತ ಕುಟುಂಬಕ್ಕೆ ಧಾನ್ಯದ ಸಾಲ ನೀಡುವ ಯೋಜನೆಯನ್ನು ಜಾರಿಗೆ ತರುವುದಾಗಿ ಹಿಂದಿನ ಕೃಷಿ ಖಾತೆ ರಾಜ್ಯ ಸಚಿವರು ವಿಧಾನ ಸಭೆಯಲ್ಲಿ ಘೋಷಿಸಿದ್ದರು ನಿಜವಲ್ಲವೇ, ?

ಆ) ಹಾಗಿದ್ದಲ್ಲಿ, ಈ ದಿಶೆಯಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).--

ಅ) ಹೌದು.

ಆ) ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ

ಹಿಪ್ಪರಗಿ ಅಣೆಕಟ್ಟಿನ ಬಗ್ಗೆ

೧೫೭. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).--ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಥಣಿ ತಾಲ್ಲೂಕಿನ ಹಿಪ್ಪರಗಿ ಅಣೆಕಟ್ಟಿನ ಕೆಲಸ ರಾಜ್ಯದ ೧೯೮೬-೮೭ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಹಣ ಒದಗಿಸಿದ್ದರೂ ಕೆಲಸ ಪ್ರಾರಂಭವಾಗದಿರಲು ಕಾರಣವೇನು ?

ಆ) ಈಗ ಅದು ಯಾವ ಹಂತದಲ್ಲಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).--

ಅ) ೧೯೮೬-೮೭ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಹಿಪ್ಪರಗಿ ಅಣೆಕಟ್ಟು ಯೋಜನೆಗೆ ಒದಗಿಸಿರುವ ಒಟ್ಟು ೫೦ ಲಕ್ಷ ರೂ. ಗಳ ಅನುದಾನವನ್ನು ಉಪಯೋಗಿಸಿಕೊಳ್ಳಲು ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ

ಆ) ಎಡ ಹಾಗೂ ಬಲ ಬದಿಯ ೫೧೧೫ ಮಿ. ಉದ್ದದ ವಿಣ್ಣಿ ಒಡ್ಡಿನ ಕಾಮಗಾರಿ ಮುಗಿಯುವ ಹಂತದಲ್ಲಿದ್ದು, ಕೋಡಿ (ಸ್ಪಿಲ್‌ವೇ)ಯ ತಳಪಾಯದ ಕಾಂಕ್ರೀಟನ್ನು ಹಾಕಲಾಗಿದೆ.

ಗುಲ್ಬರ್ಗಾ ರಾಯಚೂರು ರಸ್ತೆಯ ಬಗ್ಗೆ

೧೫೧. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).— ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಗುಲ್ಬರ್ಗಾ-ರಾಯಚೂರು ರಸ್ತೆಯ ಉದ್ದಳತೆ ಎಷ್ಟು ?

(ಆ) ಇದನ್ನು ಯಾವ ವರ್ಷದಲ್ಲಿ ಬಿ.ಟಿ. ರಸ್ತೆಯನ್ನಾಗಿ ಮಾಡಬೇಕೆಂದು ನಿರ್ಧರಿಸಲಾಗಿತ್ತು ಹಾಗೂ ಅದಕ್ಕಾಗಿ ಕಾದಿರಿಸಿದ ಹಣವೆಷ್ಟು ?

(ಇ) ಇದುವರೆಗೆ ಎಷ್ಟು ಬಿ.ಟಿ. ರಸ್ತೆಯನ್ನಾಗಿ ಪರಿವರ್ತಿಸಲಾಗಿದೆ ?

(ಈ) ಇನ್ನೂ ಎಷ್ಟನ್ನು ಪರಿವರ್ತಿಸಬೇಕಂ ಮಂತ್ರಿ ಅದಂ ಯಾವ ಉಪ-ವಿಭಾಗದಲ್ಲಿ ಹಾಗೂ ಅದನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂತ್ರಿ ನೀರಾವರಿ ಮಂತ್ರಿಗಳು).—

(ಅ) ಗುಲ್ಬರ್ಗಾ-ರಾಯಚೂರು ರಸ್ತೆಯು ಗುಲ್ಬರ್ಗಾ ಲೋಕೋಪಯೋಗಿ ವಿಭಾಗದ ವ್ಯಾಪ್ತಿಯಲ್ಲಿ ರಾಯಚೂರ ಕ್ರಾಸ್‌ವರೆಗೆ ಒಟ್ಟು ಉದ್ದಳತೆ ೩೫.೦೦ ಕಿ.ಮೀ.

(ಆ) ಈ ರಸ್ತೆಯನ್ನು ಡಾಂಬರು ಮಾಡಲು ೧೯೮೨-೮೩ರಲ್ಲಿ ರೂ. ೩೩.೬೦ ಲಕ್ಷ ಅಂದಾಜು ಪತ್ರಿಕೆಗೆ ಆನಂದೋದನೆ ಕೊಡಲಾಯಿತು. ಈ ಕೆಲಸವನ್ನು ೧೯೮೨-೮೩ರಲ್ಲಿ ಇಲಾಖೆ ವತಿಯಿಂದ ಪ್ರಾರಂಭ ಮಾಡಲಾಗಿದೆ. ನಿಗದಿ ಮಾಡಿದ ವರ್ಷವಾರು ಅನುದಾನ ಮತ್ತು ಖರ್ಚು ಮಾಡಿದ ಹಣದ ವಿವರ ಕೆಳಗಿನಂತಿದೆ.—

	೮೨-೮೩	೮೩-೮೪	೮೪-೮೫	೮೫-೮೬	೮೬-೮೭	ಒಟ್ಟು
ಅನುದಾನ ಲಕ್ಷ ರೂ.ಗಳಲ್ಲಿ	೧.೫೩	೪.೨೧	೪.೦೦	೬.೦೦	೪.೦೦	೧೯.೭೪ ಲಕ್ಷ ರೂ.ಗಳು
ಖರ್ಚು ಲಕ್ಷ ರೂ.ಗಳಲ್ಲಿ	೩.೪೫೫೪	೧೪.೪೬೦	೧೦.೪೧೬	೭.೫೯೩	೦.೭೪೦	೩೬.೬೬೩ ಲಕ್ಷ ರೂ.ಗಳು

(ಇ) ಇದಂಪರೆಗೆ ಒಟ್ಟು ೨೧.೬೦ ಕಿ.ಮೀ. ರಸ್ತೆಯನ್ನು ಬಿ.ಟಿ. ಯನ್ನಾಗಿ ಪರಿವರ್ತಿಸಲಾಗಿದೆ.

(ಈ) ಇನ್ನು ೧೨ ಕಿ.ಮೀ. ಉದ್ದ ರಸ್ತೆಗೆ ಬಿ.ಟಿ. ಮಾಡಬೇಕಾಗಿದ್ದು ಗುಲ್ಬರ್ಗಾ ಉಪ-ವಿಭಾಗದಲ್ಲಿ ೩ ಕಿ.ಮೀ. ಚಿತ್ತಾಪೂರ ಉಪ-ವಿಭಾಗದಲ್ಲಿ ೯ ಕಿ.ಮೀ. ಸೇರಿದೆ. ಈ ಕಾರ್ಯವನ್ನು ೧೯೮೮-೮೯ರ ಕೊನೆಯ ವೇಳೆಗೆ ಪೂರ್ತಿಗೊಳಿಸಲಂ ಉದ್ದೇಶಿಸಲಾಗಿದೆ.

ವರಾಹಿ ನೀರಾವರಿ ಯೋಜನೆ

೫೪. ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಯಾವುದೇ ಬೃಹತ್ ನೀರಾವರಿ ಯೋಜನೆಗಳಿಲ್ಲದ ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗಕ್ಕೆ ವರದಾನವಾಗಲಿರುವ ಹಾಗೂ ಸಕ್ಕರೆ ಕಾರ್ಖಾನೆಗೆ ಬೇಕಾದ ಕಬ್ಬು ಬೆಳೆಸಲು ಅನುಕೂಲವಾಗುವ ವಾರಾಹಿ ಯೋಜನೆಯನ್ನು ಕಡಿಮೆ ವೆಚ್ಚದಲ್ಲಿ ಹಿಂದೆ ಯೋಜಿಸಿದ ರೂಪದಲ್ಲಿ ಕಾರ್ಯಗತಗೊಳಿಸಲಾಗುವುದೆಂದು ಮಾನ್ಯ ಸಚಿವರು ಕಳೆದ ಅಧಿವೇಶನದಲ್ಲಿ ಆಶ್ವಾಸನೆ ಇತ್ತಿದ್ದು, ನಿಜವಲ್ಲವೇ ?

(ಆ) ಹಾಗಿದ್ದಲ್ಲಿ, ಆ ಯೋಜನೆ ಕಾರ್ಯ ರೂಪಕ್ಕೆ ತರುವ ಸಲುವಾಗಿ ಯಾವ ಕ್ರಮ ಕೈಕೊಳ್ಳಲಾಗಿದೆ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮಂತ್ರಿ ನೀರಾವರಿ ಮಂತ್ರಿಗಳು).—

(ಅ) ನಿಜ.

(ಆ) ವಾರಾಹಿ ನೀರಾವರಿ ಯೋಜನೆ ಕಾರ್ಯಗತ ಮಾಡಲಂ ಮುಳುಗಡೆಯಾಗುವ ಅರಣ್ಯ ಪ್ರದೇಶವನ್ನು ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿಸಿಕೊಳ್ಳುವ ಅವಶ್ಯವಿರುವುದು. ರಾಜ್ಯ ಸರ್ಕಾರದಿಂದ ರಚಿಸಲಾಗಿದ್ದ ತಜ್ಞರ ಸಮಿತಿಯು ಕೂಲಂಕುಷವಾಗಿ ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಸಂಪೂರ್ಣ ೩೦೦ ಹೆಕ್ಟೇರ್‌ರಂ ಅರಣ್ಯ ಪ್ರದೇಶವನ್ನು ಮುಳುಗಡೆಯಾಗುವ ಹಾಗೂ ಯೋಜನೆಯ ಮೂಲ ರೂಪ ರೇಷೆಯಂತೆ ೩೮,೦೦೦ ಎಕರೆ ಭೂಮಿಗೆ ನೀರಾವರಿ ಸೌಲಭ್ಯವನ್ನೊದ